(ಇಂದು ದಿನಾಂಕಃ 06-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ ಃ**

1. ಶಿವಾರೆಡ್ಡಿಯವರ ಆಸ್ತಿಗಳ ಬಗ್ಗೆ ನನಗೆ ಪರಿಚಯ ಇದೆ. ಶಿವಾರೆಡ್ಡಿಯವರ ಹೆಂಡತಿ ಮತ್ತು ಮಕ್ಕಳ ಬಗ್ಗೆ ನನಗೆ ಗೊತ್ತಿರುತ್ತದೆ. ಶಕುಂತಲಾಕಿಂತ, ಪದ್ಮಮ್ಮರವರು 4 ವರ್ಷ ಹಿರಿಯವರಾಗಿರುತ್ತಾರೆ. ಶಿವಾರೆಡ್ಡಿಯವರಿಗೆ ಒಂದು ಮನೆ ಮತ್ತು 3 ಸರ್ವೆ ನಂಬರ ಜಮೀನುಗಳುಇದ್ದವು. ಆ ಜಮೀನಿನ ಸರ್ವೆ ನಂಬರ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 2 ಎಕರೆ ಹಾಗೂ 4 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಗೋವಿಂದರೆಡ್ಡಿಯವರಿಗೆ 2 ಎಕರೆ ಜಮೀನು, ಶಾಮರಾವರವರಿಗೆ 6 ಎಕರೆ 28 ಗುಂಟೆ ಜಮೀನು, ತುಕ್ಕಮ್ಮರವರಿಗೆ ಒಂದುವರೆ ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಮನೆಯನ್ನು ಮಾಣಿಕಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಈ ಜಮೀನು ಮತ್ತು ಮನೆಯನ್ನು ಮಾರಾಟ ಮಾಡಿದ ಬಗ್ಗೆ ವಾದಿಗೆ ಮಾಹಿತಿ ಇರುತ್ತದೆ. ಗುಂಡಮ್ಮ ಮತ್ತು ಗುಂಡಮ್ಮನ ಮಕ್ಕಳು ಹಾಗೂ ಪಾರಮ್ಮ ಮತ್ತು ಪಾರಮ್ಮನ ಮಕ್ಕಳು ಎಷ್ಟು ವರ್ಷಗಳ ಹಿಂದೆ ಬೇರೆಯಾಗಿರುತ್ತಾರೆ ಎಂದರೆ ಸಾಕ್ಷಿ ಅವರು ಬೇರೆಯಾಗಿಲ್ಲ ಎಂದು ಹೇಳುತ್ತಾರೆ. ಶಿವಾರೆಡ್ಡಿ , ಗುಂಡಮ್ಮ ಮತ್ತು ವಾದಿ ಬೇರೆ ಕಡೆ ಇರುತ್ತಿದ್ದರು ಹಾಗೂ ಪಾರಮ್ಮ ಹಾಗೂ ಅವರ ಮಕ್ಕಳು ಬೇರೆ ಕಡೆ ಇರುತ್ತಿದ್ದರು ಎಂದರೆ ಸರಿಯಲ್ಲ. ಅವರು ಬೇರೆ ಆದ ನಂತರ ಗುಂಡಮ್ಮ ಮತ್ತು ಶಿವಾರೆಡ್ಡಿ ಇಬ್ಬರು ಸೇರಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಿವಾರೆಡ್ಡಿ ಬದುಕಿದ್ದಾಗಲೆ ಆಸ್ತಿಗಳನ್ನು ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಂಚಿಕೆ ಆದ ಮೇಲೆ ಶಿವಾರೆಡ್ಡಿ ಗುಂಡಮ್ಮನ ಜೊತೆ ಇರುತ್ತಿದ್ದರು ಎಂದರೆ ಸರಿಯಲ್ಲ.

2. ಮನೆಯನ್ನು ಮಾರಾಟ ಮಾಡಿ 10-12 ವರ್ಷ ಆಗಿರುತ್ತದೆ. ಮನೆಯನ್ನು ಮಾರಾಟ ಮಾಡಿದ ನಂತರ ಯಾವ ಮನೆಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ಪಾರಮ್ಮ ಹಾಗೂ ಅವರ ಮಕ್ಕಳು ಹೊಲದಲ್ಲಿ ಮನೆಯನ್ನು ಕಟ್ಟಿಸಿಕೊಂಡು ಇರುತ್ತಿದ್ದರು ಎಂದು ಹೇಳುತ್ತಾರೆ. ಪಾರಮ್ಮ

ಶಿವಾರೆಡ್ಡಿಯವರ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ. ಗುಂಡಮ್ಮ ಮತ್ತು ಪಾರಮ್ಮರವರ ನಡುವೆ ಸರಿಹೋಗದೆ ಇರುವುದರಿಂದ ಹಂಚಿಕೆ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆಸ್ತಿಗಳಿಗೆ ಸಂಬಂಧ ಪಟ್ಟಂತೆ ಪಂಚಾಯಿತಿ ಯಾವಾಗ ಆಯಿತು ಎಂದರೆ ಸಾಕ್ಷಿಯು ಯಾವುದೇ ಪಂಚಾಯಿತಿ ಆಗಿಲ್ಲ ಎಂದು ಹೇಳುತ್ತಾರೆ. ಶಕುಂತಲಾರವರು ಎಷ್ಟು ಆಸ್ತಿಗಳ ದಾವೆ ಸಲ್ಲಿಸಿರುತ್ತಾರೆ ಮತ್ತು ದಾವಾ ಆಸ್ತಿಗಳ ಸಂಖ್ಯೆ ಹಾಗೂ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪಾರಮ್ಮ ಮತ್ತು ಅವರ ಮಕ್ಕಳಿಗೆ ಸಂಬಂಧಪಟ್ಟಿದ್ದಾಗಿದ್ದು, ಗುಂಡಮ್ಮರವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಗುಂಡಮ್ಮ ಮತ್ತು ಶಿವಾರೆಡ್ಡಿ ಇಬ್ಬರು ಸೇರಿ ಮಾರಾಟ ಮಾಡಿದ್ದರು ಸಹ ಈಗ ಪಾರಮ್ಮ ಇಟ್ಟುಕೊಂಡಿರುವ ಆಸ್ತಿಗಳ ಮೇಲೆ ವಾದಿಯು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅವರ ಕುಟುಂಬದ ಬಗ್ಗೆ ಏನು ಗೊತ್ತಿಲ್ಲದಿದ್ದರುಸಹ ನನಗೆ ಸುಳ್ಳು ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಈಗಾಗಲೆ ಅವರಿಬ್ಬರ ನಡುವೆ ಪಾಲು ಆಗಿದ್ದರಿಂದ ಮತ್ತೊಮ್ಮೆ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.